# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಉದ್ಯೋಗ ಪ್ರಕಟಣೆ ಸಂಖ್ಯೆ: ಗುವಿಸಕಂನಿ/ಪ್ರ.ವ್ಯ/ಲೆ(ಸಿ)/2016-17/ಸಿವೈಎಸ್-7 ದಿನಾಂಕ:05.04.2016

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತದಲ್ಲಿ **1300** ಕಿರಿಯ ಮಾರ್ಗದಾಳು ಮತ್ತು **540** ಕಿರಿಯ **ಸ್ಟೇಷನ್ ಆಪರೇಟರ್** ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ವರ್ಗೀಕರಣ ಕೆಳಕಂಡಂತಿದೆ:

1. ಕಿರಿಯ ಮಾರ್ಗದಾಳು:

ಅನುಚ್ಛೇದ 371 (ಜೆ) ರ ಅಡಿಯಲ್ಲಿ ಹೈದರಾಬಾದ್-ಕರ್ನಾಟಕ ಮೀಸಲಾತಿ **(HKR):**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | 83 | 17 | 277 | 23 | 83 | 22 | 22 | 28 | **555** |
| ಗ್ರಾಮೀಣ ಮೀಸಲಾತಿ | 42 | 9 | 138 | 11 | 41 | 11 | 11 | 14 | **277** |
| ಅಂಗವಿಕಲ ಅಭ್ಯರ್ಥಿ (ಕೇವಲ ಶ್ರವಣ ದೋಷ ಮಾತ್ರ) | 9 | 2 | 28 | 3 | 9 | 3 | 3 | 3 | **60** |
| ಮಾಜಿ ಸೈನಿಕ | 16 | 3 | 55 | 4 | 16 | 4 | 4 | 5 | **107** |
| ಕನ್ನಡ ಮಾಧ್ಯಮ ಅಭ್ಯರ್ಥಿ | 8 | 2 | 27 | 2 | 8 | 2 | 2 | 3 | **54** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 8 | 1 | 27 | 2 | 8 | 2 | 2 | 2 | **52** |
| ಒಟ್ಟು | **166** | **34** | **552** | **45** | **165** | **44** | **44** | **55** | **1105** |

ಉಳಿಕೆ ವೃಂದ **(Non-HKR)**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | 15 | 3 | 48 | 5 | 15 | 5 | 5 | 5 | **101** |
| ಗ್ರಾಮೀಣ ಮೀಸಲಾತಿ | 8 | 2 | 25 | 2 | 8 | 2 | 2 | 3 | **52** |
| ಅಂಗವಿಕಲ ಅಭ್ಯರ್ಥಿ (ಕೇವಲ ಶ್ರವಣ ದೋಷ ಮಾತ್ರ) | 2 | 1 | 5 | 1 | 2 | 1 | 1 | 1 | **14** |
| ಮಾಜಿ ಸೈನಿಕ | 3 | – | 9 | – | 2 | – | – | – | **17** |
| ಕನ್ನಡ ಮಾಧ್ಯಮ ಅಭ್ಯರ್ಥಿ | 1 | – | 5 | – | 1 | – | – | – | **7** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 1 | – | 5 | – | 1 | – | – | – | **7** |
| ಒಟ್ಟು | **30** | **6** | **97** | **8** | **29** | **8** | **8** | **9** | **195** |

2. ಕಿರಿಯ ಸ್ಟೇಷನ್ ಆಪರೇಟರ್:-

ಕರ್ನಾಟಕ ಸರ್ಕಾರದಿಂದ ಮನ್ನಣೆಯಾದ ಔದ್ಯೋಗಿಕ ತರಬೇತಿ ಸಂಸ್ಥೆ/ಕೇಂದ್ರದಿಂದ 'ಎಲೆಕ್ಟ್ರಿಷಿಯನ್' ವೃತ್ತಿಯಲ್ಲಿ 18/24 ತಿಂಗಳಿನ ಪಠ್ಯ ಕ್ರಮದಲ್ಲಿ ಉತ್ತೀರ್ಣರಾಗಿರುವ ಐಟಿಐ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ.

ಅನುಚ್ಛೇದ 371 (ಜೆ) ರ ಅಡಿಯಲ್ಲಿ ಹೈದರಾಬಾದ್-ಕರ್ನಾಟಕ ಮೀಸಲಾತಿ **(HKR):**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 24 | 6 | 79 | 8 | 24 | 8 | 7 | 8 | **164** |
| ಗ್ರಾಮೀಣ ಮೀಸಲಾತಿ | 11 | 3 | 36 | 3 | 11 | 3 | 3 | 4 | **74** |
| ಮಾಜಿ ಸೈನಿಕ | 4 | – | 14 | 1 | 4 | 1 | 1 | 1 | **26** |
| ಕನ್ನಡ ಮಾಧ್ಯಮ ಅಭ್ಯರ್ಥಿ | 2 | – | 7 | – | 2 | – | – | 1 | **12** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 2 | – | 7 | – | 2 | – | – | – | **11** |
| ಒಟ್ಟು | **43** | **9** | **143** | **12** | **43** | **12** | **11** | **14** | **287** |

ಉಳಿಕೆ ವೃಂದ **(Non-HKR)**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 6 | 2 | 15 | 2 | 6 | 2 | 2 | 2 | **37** |
| ಗ್ರಾಮೀಣ ಮೀಸಲಾತಿ | 2 | – | 6 | – | 2 | – | – | – | **10** |
| ಮಾಜಿ ಸೈನಿಕ | – | – | 2 | – | – | – | – | – | **2** |
| ಕನ್ನಡ ಮಾಧ್ಯಮ ಅಭ್ಯರ್ಥಿ | – | – | 1 | – | – | – | – | – | **1** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | – | – | 1 | – | – | – | – | – | **1** |
| ಒಟ್ಟು | **8** | **2** | **25** | **2** | **8** | **2** | **2** | **2** | **51** |

ಕವಿಮಂ/ಕವಿಪ್ರನಿನಿ ಕೈಗಾರಿಕಾ ತರಬೇತಿ ಕೇಂದ್ರಗಳಿಂದ ತರಬೇತಿ ನಡೆಸಲಾಗುವ 3 ವರ್ಷದ'ಎಲೆಕ್ಟ್ರಿಷಿಯನ್' ವೃತ್ತಿ ತರಬೇತಿಯಲ್ಲಿ ಉತ್ತೀರ್ಣರಾಗಿರುವ ಐಟಿಸಿ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ.

ಅನುಚ್ಛೇದ 371 (ಜೆ) ರ ಅಡಿಯಲ್ಲಿ ಹೈದರಾಬಾದ್-ಕರ್ನಾಟಕ ಮೀಸಲಾತಿ **(HKR):**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 15 | 4 | 48 | 5 | 15 | 5 | 4 | 6 | **102** |
| ಗ್ರಾಮೀಣ ಮೀಸಲಾತಿ | 7 | 2 | 22 | 2 | 7 | 2 | 2 | 2 | **46** |
| ಮಾಜಿ ಸೈನಿಕ | 2 | – | 8 | – | 2 | – | – | – | **12** |
| ಕನ್ನಡ ಮಾಧ್ಯಮ ಅಭ್ಯರ್ಥಿ | 1 | – | 4 | – | 1 | – | – | – | **6** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 1 | – | 4 | – | 1 | – | – | – | **6** |
| ಒಟ್ಟು | **26** | **6** | **86** | **7** | **26** | **7** | **6** | **8** | **172** |

ಉಳಿಕೆ ವೃಂದ **(Non-HKR)**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 4 | 1 | 9 | 1 | 4 | 1 | 1 | 1 | **22** |
| ಗ್ರಾಮೀಣ ಮೀಸಲಾತಿ | 1 | – | 4 | – | 1 | – | – | – | **6** |
| ಮಾಜಿ ಸೈನಿಕ | – | – | 1 | – | – | – | – | – | **1** |
| ಕನ್ನಡ ಮಾಧ್ಯಮ ಅಭ್ಯರ್ಥಿ | – | – | 1 | – | – | – | – | – | **1** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | – | – | – | – | – | – | – | – | – |
| ಒಟ್ಟು | **5** | **1** | **15** | **1** | **5** | **1** | **1** | **1** | **30** |

**3. ಕ್ರೋಢೀಕೃತ ಸಂಭಾವನೆ ಕಿರಿಯ ಮಾರ್ಗದಾಳು:**

ಅ) ಕ್ರೋಢೀಕೃತ ಸಂಭಾವನೆ (ಮೊದಲ 3 ವರ್ಷಗಳು):

| | | |
|---|---|---|
| 1ನೇ ವರ್ಷ | : | '10,000/- ಮಾಸಿಕ |
| 2ನೇ ವರ್ಷ | : | '11,000/- ಮಾಸಿಕ |
| 3ನೇ ವರ್ಷ | : | '12,000/- ಮಾಸಿಕ |

**4. ಕ್ರೋಢೀಕೃತ ಸಂಭಾವನೆ ಕಿರಿಯ ಸ್ಟೇಷನ್ ಆಪರೇಟರ್:**

ಅ) ಕ್ರೋಢೀಕೃತ ಸಂಭಾವನೆ (ಮೊದಲ 3 ವರ್ಷಗಳು):

| | | |
|---|---|---|
| 1ನೇ ವರ್ಷ | : | '13,000/- ಮಾಸಿಕ |
| 2ನೇ ವರ್ಷ | : | '15,000/- ಮಾಸಿಕ |
| 3ನೇ ವರ್ಷ | : | '17,000/- ಮಾಸಿಕ |

ಆ) ಆಯ್ಕೆಯಾದ ಅಭ್ಯರ್ಥಿಗಳನ್ನು ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾಳಿಗಳ ಅಧ್ಯಾಯ-1 ರ 6(1)(ಇ) ರಂತೆ ಕೆಲವು ಷರತ್ತುಗಳಿಗೊಳಪಟ್ಟು ಮೂರು (3) ವರ್ಷಗಳ ತರಬೇತಿಗೆ ಒಳಪಡಿಸಲಾಗುವುದು. ತರಬೇತಿಯ ಅವಧಿಯಲ್ಲಿ ಯಾವುದೇ ಇನ್ನಿತರೆ ಭತ್ಯೆ ಹಾಗೂ ಸೌಲಭ್ಯಗಳನ್ನು ನೀಡಲಾಗುವುದಿಲ್ಲ.

ಇ) ಕಿರಿಯ ಮಾರ್ಗದಾಳು ಹುದ್ದೆಯ ಮೂರು ವರ್ಷದ ತರಬೇತಿಯನ್ನು ತೃಪ್ತಿಕರವಾಗಿ ಪೂರೈಸಿದವರನ್ನು ನೇಮಕಾತಿ ಹೊಂದಿದ ಹುದ್ದೆಗೆ ಲೆಕ್ಕೀಕರಿಸಿ, ವೇತನ ಶ್ರೇಣಿ: '7350-150-8100-190-9050-240-10250-300-11750-360-15710 ರಲ್ಲಿ ಎರಡು (2) ವರ್ಷಗಳ ಕಾಲ ಪರೀಕ್ಷಾರ್ಥ ಅವಧಿಯಲ್ಲಿ ಇರಿಸಲಾಗುವುದು.

ಈ) ಕಿರಿಯ ಸ್ಟೇಷನ್ ಆಪರೇಟರ್ ಹುದ್ದೆಯ ಮೂರು ವರ್ಷದ ತರಬೇತಿಯನ್ನು ತೃಪ್ತಿಕರವಾಗಿ ಪೂರೈಸಿದವರನ್ನು ನೇಮಕಾತಿ ಹೊಂದಿದ ಹುದ್ದೆಗೆ ಲೆಕ್ಕೀಕರಿಸಿ, ವೇತನ ಶ್ರೇಣಿ: '7950-150-8100-190-9050-240-10250-300-11750-360-16790 ರಲ್ಲಿ ಎರಡು (2) ವರ್ಷಗಳ ಕಾಲ ಪರೀಕ್ಷಾರ್ಥ ಅವಧಿಯಲ್ಲಿ ಇರಿಸಲಾಗುವುದು.

**5. ಹುದ್ದೆಗಳ ಭರ್ತಿ:**

ಆಯ್ಕೆಯಾಗುವ ಅಭ್ಯರ್ಥಿಗಳನ್ನು ಗುವಿಸಕಂಪನಿಯ ಆರು ಜಿಲ್ಲೆಗಳ ಕಚೇರಿಯ ವ್ಯಾಪ್ತಿಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು.

**6. ಅಗತ್ಯ ವಿದ್ಯಾರ್ಹತೆ:**

**ಕಿರಿಯ ಮಾರ್ಗದಾಳು ಹುದ್ದೆ:-** ಕರ್ನಾಟಕ ರಾಜ್ಯದ ವಿದ್ಯಾಸಂಸ್ಥೆಗಳಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದಿರಬೇಕು. **(ಮುಕ್ತ ವಿಶ್ವವಿದ್ಯಾಲಯದಲ್ಲಿ 10ನೇ ತರಗತಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸುವ ಅವಕಾಶವಿರುವುದಿಲ್ಲ).**

**ಕಿರಿಯ ಸ್ಟೇಷನ ಆಪರೇಟರ್ ಹುದ್ದೆ:-** ಕರ್ನಾಟಕ ರಾಜ್ಯದ ವಿದ್ಯಾಸಂಸ್ಥೆಗಳಿಂದ ಎರಡು ವರ್ಷ ಐಟಿಐ (ಎಲೆಕ್ಟ್ರಿಷಿಯನ್ ವೃತ್ತಿ) ಅಥವಾ ಮೂರು ವರ್ಷ ಐಟಿಸಿ ಕವಿಮಂ/ಕವಿಪ್ರನಿನಿ ತರಬೇತಿ ಕೇಂದ್ರದಿಂದ "ಎಲೆಕ್ಟ್ರಿಷಿಯನ್" ವೃತ್ತಿಯಲ್ಲಿ ಮೂರು ವರ್ಷಗಳ ಅವಧಿಯ ತರಬೇತಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದಿರಬೇಕು.

**ಇತರೆ ಅರ್ಹತೆಗಳು:**

i) ಕನ್ನಡದಲ್ಲಿ ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು.

ii) ತೃಪ್ತಿಕರ ನೇತ್ರದೃಷ್ಟಿಯನ್ನು ಹೊಂದಿರಬೇಕು.

iii) ತೃಪ್ತಿಕರ ದೇಹದಾರ್ಢ್ಯವನ್ನು ಹೊಂದಿರಬೇಕು. ಕಠಿಣ ಕೆಲಸಗಳಾದ ಗುಂಡಿ ತೆಗೆಯುವುದು, ಗೋಪುರ ಅಥವಾ ಕಂಬ ಹತ್ತುವುದು, ಭಾರವಾದ ವಸ್ತುಗಳನ್ನು ಸಾಗಿಸುವುದು, ತಂತಿಗಳನ್ನು ಹಾಕುವುದು, ಕಂಬಗಳನ್ನು ಬದಲಾಯಿಸುವುದು, ಇತ್ಯಾದಿ ಕೆಲಸಕಾರ್ಯಗಳನ್ನು ನಿರ್ವಹಿಸಲು ತಯಾರಿರಬೇಕು ಮತ್ತು ಸಹನ ಶಕ್ತಿ ಪರೀಕ್ಷೆಯಲ್ಲಿ ಅರ್ಹತೆ ಗಳಿಸಬೇಕು.

**7. ಅರ್ಹತೆ:**

**ಕಿರಿಯ ಮಾರ್ಗದಾಳು ಹುದ್ದೆ:–**

ಅರ್ಹತಾದಾಯಕ ಪರೀಕ್ಷೆಯಲ್ಲಿ ಕನಿಷ್ಠ ತೇರ್ಗಡೆ ಅಂಕಗಳನ್ನು ಪಡೆದಿರುವಂತಹ ಅಭ್ಯರ್ಥಿಗಳು ಮೇಲೆ ತಿಳಿಸಿರುವ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ:

**ಕಿರಿಯ ಸ್ಟೇಷನ್ ಆಪರೇಟರ್ ಹುದ್ದೆ:–**

| ಕ್ರ.ಸಂ | ಪ್ರವರ್ಗ | ಶೇಕಡಾ |
|---|---|---|
| 1 | ಸಾಮಾನ್ಯ ವರ್ಗ | 50% |
| 2 | 2ಎ, 2ಬಿ, 3ಎ, 3ಬಿ | 45% |
| 3 | ಎಸ್.ಸಿ/ಎಸ್.ಟಿ ಮತ್ತು ಪ್ರವರ್ಗ–1 | ತೇರ್ಗಡೆ |

**8. ಆಯ್ಕೆ:**

ಮೇಲಿನ ಹುದ್ದೆಗಳಿಗೆ ಆಯ್ಕೆಯನ್ನು ಅರ್ಹತಾದಾಯಕ ವಿದ್ಯಾರ್ಹತೆಯಲ್ಲಿ ಗಳಿಸಿರುವ ಶೇಕಡಾವಾರು ಅಂಕಗಳ ಶ್ರೇಷ್ಠತೆ ಆಧಾರದ ಮೇಲೆ ಮತ್ತು 'ಸಹನ ಶಕ್ತಿ ಪರೀಕ್ಷೆ'ಯಲ್ಲಿನ ಅರ್ಹತೆಗೆ ಅನುಗುಣವಾಗಿ ಮಾತ್ರ ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ನು ಪಾಲಿಸಿ ಮಾಡಲಾಗುವುದು. ವಿವಿಧ ಜಾತಿ/ವರ್ಗ/ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳನ್ನು ಅರ್ಹತೆ ಆಧಾರದ ಮೇಲೆ 1:5 ರ ಅನುಪಾತದಲ್ಲಿ ಸಹನ ಶಕ್ತಿ ಪರೀಕ್ಷೆಗೆ ಕರೆಯಲಾಗುವುದು.

ಸಹನ ಶಕ್ತಿ ಪರೀಕ್ಷೆಗೆ ಈ ಕೆಳಗಿನ ಸ್ಪರ್ಧೆಗಳನ್ನು ನಿಗದಿಪಡಿಸಲಾಗಿದೆ.

| | | |
|---|---|---|
| ಅ) | 100 ಮೀಟರ್ ಓಟ | : 15 ಸೆಕೆಂಡ್‌ಗಳು |
| ಆ) | ಸ್ಕಿಪ್ಪಿಂಗ್ | : ಒಂದು ನಿಮಿಷಕ್ಕೆ 50 ಬಾರಿ |
| ಇ) | ಶಾಟ್‌ಪುಟ್ (12 ಪೌಂಡ್‌ಗಳು) | : 8 ಮೀಟರ್ ಎಸೆತ (3 ಅವಕಾಶಗಳು) |
| ಈ) | ವಿದ್ಯುತ್ ಕಂಬ ಹತ್ತುವುದು | : 8 ಮೀಟರ್ ಎತ್ತರ (ಕಡ್ಡಾಯ) |
| ಉ) | 800 ಮೀಟರ್ ಓಟ | : 3 ನಿಮಿಷಗಳು |

**ಟಿಪ್ಪಣಿ:**

i) ಸಹನ ಶಕ್ತಿಯ ಪರೀಕ್ಷೆಯ ಸ್ಪರ್ಧೆಗಳಿಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗಲು ಕಡ್ಡಾಯವಾಗಿ ವಿದ್ಯುತ್ ಕಂಬವನ್ನು ಹತ್ತುವುದು (ಸ್ಪರ್ಧೆ ಸಂಖ್ಯೆ: ಈ) ಮತ್ತು ಇನ್ನುಳಿದ ಸ್ಪರ್ಧೆಗಳಲ್ಲಿ ಕನಿಷ್ಠ ಎರಡು ಸ್ಪರ್ಧೆಗಳಲ್ಲಿ ಅರ್ಹತೆಯನ್ನು ಹೊಂದಿರಬೇಕಿರುತ್ತದೆ.

ii) ಸಹನ ಶಕ್ತಿ ಪರೀಕ್ಷೆಯ ಸಮಯದಲ್ಲಿ ಅಭ್ಯರ್ಥಿಗಳು ಸರ್ಕಾರಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ನೀಡಲಾಗುವ ಶಾರೀರಿಕ ದಾರ್ಢ್ಯತೆ ಸಂಬಂಧ ವೈದ್ಯಕೀಯ ಅರ್ಹತಾ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

iii) ಪತ್ರಿಕಾ ಪ್ರಕಟಣೆ/ವೆಬ್‌ಸೈಟ್ ಮೂಲಕ ಸಹನ ಶಕ್ತಿ ಪರೀಕ್ಷೆಯ ಸ್ಥಳ, ದಿನಾಂಕವನ್ನು ಅರ್ಹ ಅಭ್ಯರ್ಥಿಗಳಿಗೆ (shortlisted candidates) ತಿಳಿಸಲಾಗುವುದು. ಮೊಬೈಲ್ ಸಂಖ್ಯೆ ನೀಡಿದಂತಹ ಅಭ್ಯರ್ಥಿಗಳಿಗೆ ಎಸ್.ಎಂ.ಎಸ್. ಮುಖಾಂತರವೂ ಸಹ ತಿಳಿಸಲಾಗುವುದು.

iv) ಸಹನ ಶಕ್ತಿ ಪರೀಕ್ಷೆ ಹಾಗೂ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ದಾಖಲಾತಿಗಳ ಪರಿಶೀಲನೆಯನ್ನು ಸಹನ ಶಕ್ತಿ ಪರೀಕ್ಷೆಯ ಸಂದರ್ಭದಲ್ಲಿ ಮಾಡಲಾಗುವುದು. ಸಹನ ಶಕ್ತಿ ಪರೀಕ್ಷೆಯ ಸಮಯಕ್ಕೆ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳ 'ಸ್ವಯಂ ದೃಢೀಕೃತ

ಪ್ರತಿ'ಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. ಅಭ್ಯರ್ಥಿಯು ಮೂಲ ದಾಖಲಾತಿಗಳನ್ನು ಪರಿಶೀಲನೆಯ ಸಮಯದಲ್ಲಿ ಸಲ್ಲಿಸದಿದ್ದಲ್ಲಿ, ಸಹನ ಶಕ್ತಿ ಪರೀಕ್ಷೆಗೆ ಭಾಗವಹಿಸಲು ಅವಕಾಶವನ್ನು ನೀಡುವುದಿಲ್ಲ.

v) ಶ್ರವಣ ದೋಷದ ಅಂಗವಿಕಲತೆ ಮಿಸಲಾತಿ ಅಡಿಯಲ್ಲಿ ಕೇವಲ ಶ್ರವಣ ದೋಷ ಹೊಂದಿರುವ ಅಭ್ಯರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಇತರೆ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. **(ಶ್ರವಣದೋಷ ಅಂಗವಿಕಲತೆ ಜೊತೆಗೆ ಇತರೆ ಅಂಗವಿಕಲತೆ ಇರಕೂಡದು).**

vi) ಕಲಂ 371 (ಜೆ) ರ ಅನ್ವಯ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು, ಸಕ್ಷಮ ಪ್ರಾಧಿಕಾರಿಗಳಿಂದ 371 (ಜೆ) ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು.

**9. ವಯೋಮಿತಿ:**

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷ ತುಂಬಿದವರಾಗಿರಬೇಕು ಹಾಗೂ ಈ ಕೆಳಗಿನ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| | | | |
|---|---|---|---|
| 1. | ಸಾಮಾನ್ಯ ವರ್ಗದ ಅಭ್ಯರ್ಥಿಗಳು | : | 35 ವರ್ಷಗಳು |
| 2. | ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು | : | 38 ವರ್ಷಗಳು |
| 3. | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು | : | 40 ವರ್ಷಗಳು |

**ಟಿಪ್ಪಣಿ:**

ಅ) ಮಾಜಿ ಸೈನಿಕರಿಗೆ ಅವರು ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿರುವ ಅವಧಿಗೆ ಮೂರು ವರ್ಷಗಳಷ್ಟು ಸೇರಿಸಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಗರಿಷ್ಠ 45 ವರ್ಷಗಳವರೆಗೆ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಲಾಗುವುದು.

**10. ಅರ್ಜಿ ಶುಲ್ಕ:**

ಕಿರಿಯ ಮಾರ್ಗದಾಳು ಹುದ್ದೆ;–

a) ಸಾಮಾನ್ಯ ವರ್ಗ ಮತ್ತು ಪ್ರವರ್ಗ–1, 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ–**ರೂ.200/–** (ರೂಪಾಯಿ ಎರಡು ನೂರು ಮಾತ್ರ).

b) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ – **ರೂ.100/–** (ರೂಪಾಯಿ ಒಂದು ನೂರು ಮಾತ್ರ).

**ಸೂಚನೆ:– ಶ್ರವಣ ದೋಷ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಆದಾಗ್ಯೂ ಸದರಿ ಅಂಗವಿಕಲತೆಯ ಬಗ್ಗೆ ಸಕ್ಷಮ ಪ್ರಾಧಿಕಾರಿಯವರು ನೀಡಿರುವ ವೈದ್ಯಕೀಯ ದೃಢೀಕರಣ/ಅಂಗವಿಕಲತೆಯ ದೃಢೀಕರಣ ಪತ್ರವನ್ನು ಕೋರಿದಾಗ ಹಾಜರುಪಡಿಸಬೇಕಿರುತ್ತದೆ.**

ಕಿರಿಯ ಸ್ಟೇಷನ್ ಆಪರೇಟರ್ ಹುದ್ದೆ;–

a) ಸಾಮಾನ್ಯ ವರ್ಗ ಮತ್ತು ಪ್ರವರ್ಗ–1, 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ–**ರೂ.400/–** (ರೂಪಾಯಿ ನಾಲ್ಕು ನೂರು ಮಾತ್ರ).

b) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ – **ರೂ.200/–** (ರೂಪಾಯಿ ಎರಡು ನೂರು ಮಾತ್ರ).

**ಸೂಚನೆ:– ಕಿರಿಯ ಸ್ಟೇಷನ್ ಆಪರೇಟರ್ ಹುದ್ದೆಯ ಕೆಲಸವು ಗುವಿಸಕಂನಿಯ ವ್ಯಾಪ್ತಿಯ ಎಮ್.ಯು.ಎಸ್.ಎಸ್ ನಲ್ಲಿ ಕೆಲಸ ನಿರ್ವಹಿಸಬೇಕಾಗಿರುವುದರಿಂದ ಈ ಹುದ್ದೆಗೆ ಯಾವುದೆ ತರಹದ ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸುವ ಅವಕಾಶವಿರುವುದಿಲ್ಲ.**

**11. ಅರ್ಜಿ ಸಲ್ಲಿಸುವ ವಿಧಾನ:**

i) ಅರ್ಜಿಯನ್ನು ಕಡ್ಡಾಯವಾಗಿ ಗುವಿಸಕಂನಿ ವೆಬ್‌ಸೈಟ್ www.gescom.in ಅನ್ನು ಲಾಗ್ ಮಾಡುವುದರೊಂದಿಗೆ 'ಆನ್-ಲೈನ್' ಮೂಲಕ ಸಲ್ಲಿಸಬೇಕು. ಇತರೆ ಯಾವುದೇ ವಿಧಾನದಲ್ಲಿ ಅರ್ಜಿಗಳನ್ನು ಸಲ್ಲಿಸುವ ಅವಕಾಶವಿರುವುದಿಲ್ಲ.

ii) ಅಭ್ಯರ್ಥಿಗಳು ಅರ್ಜಿಯನ್ನು 'ಆನ್‌ಲೈನ್' ಮುಖಾಂತರ ದಿನಾಂಕ: 11.04.2016 ರಿಂದ 29.04.2016 ಸಂಜೆ 5:30 ಗಂಟೆಯವರೆವಿಗೂ ಸಲ್ಲಿಸಬಹುದಾಗಿರುತ್ತದೆ.

iii) ಅಭ್ಯರ್ಥಿಗಳು ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು ಹಾಗೂ ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.

iv) ಒಂದು ವೇಳೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸದಿದ್ದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

v) ಅರ್ಜಿ ಶುಲ್ಕವನ್ನು, ದಿನಾಂಕ: 11.04.2016 ರಿಂದ ದಿನಾಂಕ: 30.04.2016 ರ ವರೆಗೆ ಅಂಚೆ ಕಚೇರಿಯ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು. ನಿಗದಿತ ಅವಧಿಯ ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಯಾವುದೇ ನೇಮಕಾತಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

vi) ಅರ್ಜಿ ಶುಲ್ಕದ ನಮೂನೆಯನ್ನು ಗುವಿಸಕಂಪನಿ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಂಡು, ಅರ್ಜಿ ಶುಲ್ಕವನ್ನು ಯಾವುದಾದರೂ ಅಂಚೆ ಕಚೇರಿಯ ಮುಖಾಂತರ ಪಾವತಿಸಬೇಕಿರುತ್ತದೆ. ಅರ್ಜಿ ಶುಲ್ಕದ ಜೊತೆಗೆ ರೂ.12/-ನ್ನು ಅಂಚೆ ಕಚೇರಿಯ ಸೇವಾ ಶುಲ್ಕವಾಗಿ ಪಾವತಿಸಬೇಕಿರುತ್ತದೆ.

vii) ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ, ಅದನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಯಾವುದೇ ನೇಮಕಾತಿಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.

viii) 'ಆನ್-ಲೈನ್' ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು 'ಸ್ವೀಕೃತಿ ಪತ್ರ'ಗಳ ಮುದ್ರಿತ ಪ್ರತಿ (Print-out) ತೆಗೆದಿರಿಸಿಕೊಳ್ಳತಕ್ಕದ್ದು.

ix) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

x) 'ಆನ್-ಲೈನ್' ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಮತ್ತು ಇತರೆ ಸ್ಪಷ್ಟೀಕರಣಕ್ಕಾಗಿ ಸಹಾಯವಾಣಿ (HELP LINE) ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯುವುದು.

**ಸ್ಥಿರ ದೂರವಾಣಿ ಸಂಖ್ಯೆ:** 08472-239004/256782

**12. ಸಾಮಾನ್ಯ ಸೂಚನೆಗಳು:**

i) ಭಾರತೀಯ ನಾಗರೀಕರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ii) ಅಭ್ಯರ್ಥಿಯು ಅಪರಾಧಿಯೆಂದು ಘೋಷಿಸಲ್ಪಟ್ಟರೆ ಅಥವಾ ಕೇಂದ್ರ ಲೋಕಸೇವಾ/ರಾಜ್ಯ ಲೋಕಸೇವಾ ಆಯೋಗದಿಂದ ಯಾವುದೇ ಪರೀಕ್ಷೆಯನ್ನು ಬರೆಯಲು ಅಥವಾ ಯಾವುದೇ ಹುದ್ದೆಗೆ ಆಯ್ಕೆಯಾಗಲು ತಾತ್ಕಾಲಿಕವಾಗಿ/ಖಾಯಂ ಆಗಿ ತಡೆಹಿಡಿಯಲ್ಪಟ್ಟಿದ್ದರೆ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ. ಆದಾಗ್ಯೂ ನಿಗಮವು ಅಂತಹ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಅಂತಹ ಅಭ್ಯರ್ಥಿಯು ಅರ್ಹನೆಂದು ತೀರ್ಮಾನಿಸಿದಲ್ಲಿ ಮಾತ್ರ ನೇಮಕಾತಿಗೆ ಅರ್ಹನಾಗಿರುತ್ತಾನೆ.

iii) ಅರ್ಜಿಯಲ್ಲಿ ಸುಳ್ಳು ಮಾಹಿತಿಗಳನ್ನು ಒದಗಿಸಿ, ಉದ್ಯೋಗ ಪಡೆದ ಅಭ್ಯರ್ಥಿಗಳನ್ನು ಸೇವೆಯಿಂದ ವಜಾಗೊಳಿಸಲಾಗುವುದು.

iv) ಅರ್ಜಿಯಲ್ಲಿ ನೀಡುವ ಅಂಚೆ ವಿಳಾಸವು ಅಂತಿಮವಾಗಿದ್ದು, ಪತ್ರ ವ್ಯವಹಾರವನ್ನು ಅದೇ ವಿಳಾಸದೊಂದಿಗೆ ನಡೆಸಲಾಗುವುದು.

v) ವಿಳಾಸ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

vi) ಅರ್ಜಿಗಳನ್ನು 'ಆನ್ ಲೈನ್' ನಲ್ಲಿ ಭರ್ತಿ ಮಾಡುವ ಪೂರ್ವದಲ್ಲಿ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆಯೊಂದಿಗೆ ಲಭ್ಯವಿರುವ ಸೂಚನೆಗಳನ್ನು ಗಮನಿಸತಕ್ಕದ್ದು.

vii) ಅಭ್ಯರ್ಥಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ಯಲ್ಲಿನ ಮೀಸಲಾತಿಗೆ ಹಾಗೂ ಸಮತಲ ಮೀಸಲಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ವಿವಿಧ ಆದೇಶಗಳಲ್ಲಿನ ಮಾನದಂಡವನ್ನು ತಿಳಿದಿರತಕ್ಕದ್ದು.

viii) ಅಭ್ಯರ್ಥಿಗಳ ಅರ್ಹತೆ ಕುರಿತು ಕಂಪನಿಯ ತೀರ್ಮಾನವೇ ಅಂತಿಮವಾಗಿದ್ದು, ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರತಕ್ಕದ್ದು.

ix) ನೇಮಕಾತಿಗಾಗಿ ಯಾವುದೇ ವಿಧದ ಪ್ರಭಾವ ಬೀರಲು ಅಭ್ಯರ್ಥಿ ನಡೆಸುವ ಪ್ರಯತ್ನವು, ಅಭ್ಯರ್ಥಿಯನ್ನು ಅನರ್ಹಗೊಳಿಸುವುದು.

x) ಅಭ್ಯರ್ಥಿಗಳು ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳನ್ನು ಸಲ್ಲಿಸಲು ಕರೆ ನೀಡಿದಾಗ, ಪರಿಶೀಲನೆಗಾಗಿ ದೃಢೀಕೃತ ಪ್ರತಿಗಳೊಂದಿಗೆ ಹಾಜರುಪಡಿಸತಕ್ಕದ್ದು.

xi) ನೇಮಕಾತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳು **ಉಚಿತ ವಿದ್ಯುಚ್ಛಕ್ತಿ ಸರಬರಾಜು ಸೌಲಭ್ಯಕ್ಕೆ** ಅರ್ಹರಾಗಿರುವುದಿಲ್ಲ.

xii) ಕಂಪನಿಯು ಯಾವುದೇ ಹಂತದಲ್ಲಾದರೂ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ಹಾಗೂ ಅಗತ್ಯವಿದ್ದಲ್ಲಿ ಹೊಸದಾಗಿ/ತಿದ್ದುಪಡಿ ಪ್ರಕಟಣೆ ನೀಡುವ ಹಕ್ಕನ್ನು ಕಾಯ್ದಿರಿಸಿದೆ.

xiii) ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುವಾಗ ನೇಮಕಾತಿ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಅವಕಾಶವಿರುವುದಿಲ್ಲ.

xiv) ಅಭ್ಯರ್ಥಿಗಳು ಹಿಂದುಳಿದ ವರ್ಗದ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸಿ ಅದೇ ಪ್ರವರ್ಗದಡಿಯಲ್ಲಿ ಆಯ್ಕೆಯಾಗುವಂತಹ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರವನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗುವುದು.

xv) ಈಗಾಗಲೇ ಯಾವುದೇ ಸರ್ಕಾರಿ ಸೇವೆಯಲ್ಲಿರುವ/ಸೇವೆ ಸಲ್ಲಿಸಿದ ಅಭ್ಯರ್ಥಿಗಳು, ಅವರುಗಳ ನೇಮಕಾತಿ ಪ್ರಾಧಿಕಾರದಿಂದ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ನಿರಾಕ್ಷೇಪಣಾ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು.

xvi) ಸರ್ಕಾರದ ಆದೇಶ ಸಂಖ್ಯೆ: ಇಎನ್ 119 ಇಇಬಿ 2015, ದಿನಾಂಕ:23.05.2015 ರಲ್ಲಿ ಕಿರಿಯ ಸ್ಟೇಷನ್ ಆಪರೇಟರ್ ಹಾಗೂ ಕಿರಿಯ ಮಾರ್ಗದಾಳು ಹುದ್ದೆಯ ನೇರ ನೇಮಕಾತಿಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮ–1977 ರ ನಿಯಮ – 9(1ಬಿ) ಯ 3ನೇ ಪರಂತುಕದನ್ವಯ ಮಹಿಳೆಯರಿಗೆ ಶೇ.30 ರಷ್ಟು ನೀಡುವ ಸಮತಲ ಮೀಸಲಾತಿಯಿಂದ ವಿನಾಯಿತಿಯನ್ನು ನೀಡಿರುತ್ತದೆ.

## 13. ಸಮತಲ ಮೀಸಲಾತಿ:

| | | |
|---|---|---|
| 1. | ಗ್ರಾಮೀಣ ಮೀಸಲಾತಿ | ಗ್ರಾಮೀಣ ಮೀಸಲಾತಿ ಪಡೆಯಬಯಸುವ ಅಭ್ಯರ್ಥಿಗಳು, ಸರ್ಕಾರವು ತನ್ನ ಆದೇಶ ಸಂಖ್ಯೆ: ದಿನಾಂಕ: 10.08.2005 ರಲ್ಲಿ ಸೂಚಿಸಿರುವ ಗ್ರಾಮೀಣ ಪ್ರದೇಶಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ನಿರಂತರವಾಗಿ ವ್ಯಾಸಂಗ ಮಾಡಿರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿರುವುದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗದಿತ ನಮೂನೆಯಲ್ಲಿ ದೃಢೀಕರಿಸಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ಜಿಲ್ಲಾ ಶಿಕ್ಷಣಾಧಿಕಾರಿ 'ಮೇಲು ಸಹಿ' ಮಾಡಿರಬೇಕು. |
| 2. | ಮಾಜಿ ಸೈನಿಕರು | ಸೇನೆಯಿಂದ ಬಿಡುಗಡೆ ಹೊಂದಿರುವುದಕ್ಕೆ ಪ್ರಮಾಣ ಪತ್ರ ಹೊಂದಿರಬೇಕು. |

| | | |
|---|---|---|
| 3. | ಕನ್ನಡ ಮಾಧ್ಯಮ ಅಭ್ಯರ್ಥಿಗಳು | ಕನ್ನಡ ಮಾಧ್ಯಮದಲ್ಲಿ ನಿರಂತರವಾಗಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವುದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗದಿತ ನಮೂನೆಯಲ್ಲಿ ದೃಢೀಕರಿಸಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ಜಿಲ್ಲಾ ಶಿಕ್ಷಣಾಧಿಕಾರಿ 'ಮೇಲು ಸಹಿ' ಮಾಡಿರಬೇಕು. |
| 4. | ಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿಗಳು | ಯೋಜನೆಗಳಿಗಾಗಿ ಮನೆ/ಜಮೀನುಗಳನ್ನು ಕಳೆದುಕೊಂಡಿರುವುದಕ್ಕೆ ಮನೆ/ ಜಮೀನುಗಳನ್ನು ವಶಪಡಿಸಿಕೊಂಡ ಸಂಬಂಧಪಟ್ಟ ಸಕ್ಷಮ ಸರ್ಕಾರಿ ಪ್ರಾಧಿಕಾರಿಯಿಂದ ನೀಡಲ್ಪಟ್ಟ 'ಯೋಜನಾ ನಿರಾಶ್ರಿತ ಪ್ರಮಾಣ ಪತ್ರ' ಗಳನ್ನು ಹೊಂದಿರಬೇಕು. |
| 5. | ಹೈದರಾಬಾದ್–ಕರ್ನಾಟಕ ಮೀಸಲಾತಿ (ಕಂಪನಿಗಳಿಗೆ ಅನ್ವಯಿಸಿದ್ದಲ್ಲಿ) | ಹೈದರಾಬಾದ್–ಕರ್ನಾಟಕ ವ್ಯಾಪ್ತಿಯಡಿಯಲ್ಲಿ [ಅನುಚ್ಛೇದ–371(ಜೆ)] ಮೀಸಲಾತಿ ಪಡೆಯಬಯಸುವ ಅಭ್ಯರ್ಥಿಗಳು, ಸರ್ಕಾರದ ಅಧಿಸೂಚನೆ–1 ಮತ್ತು 2 ಸಂಖ್ಯೆ: ಡಿಪಿಎಆರ್ 43 ಹೆಚ್‌ಕೆಸಿ 2013, ದಿನಾಂಕ: 07.01.2014 ರ ಅನ್ವಯ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ಆದೇಶ, 2013 ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರಗಳನ್ನು ಪಡೆದು ಸಲ್ಲಿಸಬೇಕು. |
| 6 | ವಿಕಲಚೇತನ ಅಭ್ಯರ್ಥಿ | ಶ್ರವಣ ದೋಷದ ಕನಿಷ್ಠ ಶೇ.40 ರಷ್ಟು ನ್ಯೂನ್ಯತೆ ಅಥವಾ ಅಂಗವಿಕಲತೆ ಹೊಂದಿರುವ ಬಗ್ಗೆ ಸಂಬಂಧಪಟ್ಟ ವೈದ್ಯಕೀಯ ಪ್ರಾಧಿಕಾರಿಗಳು ನೀಡಿರುವ ಪ್ರಮಾಣ ಪತ್ರವನ್ನು ಹೊಂದಿರಬೇಕು. |

**14. ಕಿರಿಯ ಮಾರ್ಗದಾಳು ಹುದ್ದೆಗಳ ಕೆಲಸ ಮತ್ತು ಜವಾಬ್ದಾರಿಗಳು:**

i) ವಿದ್ಯುತ್ ಕಂಬಗಳ ನೆಡುವಿಕೆ, ಗುಂಡಿಗಳ ಅಗೆಯುವಿಕೆ, ಕಂಬಗಳ ಮತ್ತು ಪೂರಕ ಸಾಮಗ್ರಿಗಳನ್ನು ಹೊರುವುದು, ಮಾರ್ಗಗಳ ತಪಾಸಣೆ, ಬೀದಿ ದೀಪಗಳ ಆನ್ ಮತ್ತು ಆಫ್, ಬೀದಿ ದೀಪಗಳ ಬದಲಾವಣೆ, ಮಾರ್ಗಗಳ ನಿರ್ವಹಣೆಗಾಗಿ ಕಂಬಗಳನ್ನು ಹತ್ತಿ ಕಾರ್ಯನಿರ್ವಹಿಸುವುದು, ಮಾರ್ಗದಾಳು/ಮಾರ್ಗಕರ್ಮಿ ರವರುಗಳು ನಿರ್ವಹಿಸುವ ಮಾರ್ಗಗಳ ನಿರ್ವಹಣೆ ಕಾರ್ಯದಲ್ಲಿ ಸಹಾಯ ಮಾಡುವುದು, ಫ್ಯೂಸ್ ಆಫ್ ಕಾಲ್ ಮತ್ತು ದೋಷಗಳನ್ನು ಕಂಡುಹಿಡಿದು ಸರಿಪಡಿಸುವುದು, ಕ್ಯಾಂಪ್‌ಗಳಲ್ಲಿ ಕಾರ್ಯನಿರ್ವಹಿಸುವುದು ಹಾಗೂ ಪೂರಕ ದಾಖಲೆಗಳನ್ನು ನಿರ್ವಹಿಸುವುದು ಅಲ್ಲದೇ ಶಾಖೆಯ ಮುಖ್ಯಸ್ಥರು ಕಂಪನಿಯ ಹಿತದೃಷ್ಟಿಯಿಂದ ವಹಿಸುವ ಯಾವುದೇ ಕೆಲಸಗಳನ್ನು ನಿರ್ವಹಿಸುವುದು.

ii) ಅಗತ್ಯ ಇರುವ ಸ್ಥಳಗಳಲ್ಲಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸುವುದು.

**15. ಕಿರಿಯ ಸ್ಟೇಷನ ಆಪರೇಟರ್ ಹುದ್ದೆಗಳ ಕೆಲಸ ಮತ್ತು ಜವಾಬ್ದಾರಿಗಳು:**

i) ವಿದ್ಯುತ್ ಕಂಬಗಳ ನೆಡುವಿಕೆ, ಗುಂಡಿಗಳ ಅಗೆಯುವಿಕೆ, ಕಂಬಗಳ ಮತ್ತು ಪೂರಕ ಸಾಮಗ್ರಿಗಳನ್ನು ಹೊರುವುದು, ಮಾರ್ಗಗಳ ತಪಾಸಣೆ, ಬೀದಿ ದೀಪಗಳ ಆನ್ ಮತ್ತು ಆಫ್, ಬೀದಿ ದೀಪಗಳ ಬದಲಾವಣೆ, ಮಾರ್ಗಗಳ ನಿರ್ವಹಣೆಗಾಗಿ ಕಂಬಗಳನ್ನು ಹತ್ತಿ ಕಾರ್ಯನಿರ್ವಹಿಸುವುದು, ಮಾರ್ಗದಾಳು/ಮಾರ್ಗಕರ್ಮಿ ರವರುಗಳು ನಿರ್ವಹಿಸುವ ಮಾರ್ಗಗಳ ನಿರ್ವಹಣೆ ಕಾರ್ಯದಲ್ಲಿ ಸಹಾಯ ಮಾಡುವುದು, ಫ್ಯೂಸ್ ಆಫ್ ಕಾಲ್ ಮತ್ತು ದೋಷಗಳನ್ನು ಕಂಡುಹಿಡಿದು ಸರಿಪಡಿಸುವುದು, ಕ್ಯಾಂಪ್‌ಗಳಲ್ಲಿ ಕಾರ್ಯನಿರ್ವಹಿಸುವುದು ಹಾಗೂ ಪೂರಕ ದಾಖಲೆಗಳನ್ನು ನಿರ್ವಹಿಸುವುದು ಅಲ್ಲದೇ ಶಾಖೆಯ ಮುಖ್ಯಸ್ಥರು ಕಂಪನಿಯ ಹಿತದೃಷ್ಟಿಯಿಂದ ವಹಿಸುವ ಯಾವುದೇ ಕೆಲಸಗಳನ್ನು ನಿರ್ವಹಿಸುವುದು ಮತ್ತು ಎಮ್.ಯು.ಎಸ್.ಎಸ್ ನಲ್ಲಿ ಕಾರ್ಯನಿರ್ವಹಿಸುವುದು.

ii) ಅಗತ್ಯ ಇರುವ ಸ್ಥಳಗಳಲ್ಲಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸುವುದು.

ವ್ಯವಸ್ಥಾಪಕ ನಿರ್ದೇಶಕರು ಹಾಗೂ
ಅಧ್ಯಕ್ಷರು ನೇಮಕಾತಿ ಸಮಿತಿ
ಗುವಿಸಕಂನಿ, ಕಲಬುರಗಿ